



ಸಿಕ್ಕಿಂನಲ್ಲಿ ಪ್ರವಾಸಿಗರ ಸಂಭ್ರಮ

ಪ್ರವಾಸಿತಾಣ. ಅಲ್ಲಿನ ಅಂಗಡಿಗಳಲ್ಲಿ ಊಟ ತಿಂಡಿ ಆಹಾರ ಸಾಮಾನುಗಳು ಗ್ಯಾಂಗ್ಟಕ್‌ನಿಂದ ಬಂದಿದ್ದರೆ, ಬಟ್ಟೆಯಿಂದ ಹಿಡಿದು ಉಳಿದೆಲ್ಲ ಸಾಮಾನುಗಳು ಚೀನಾದಿಂದ ಬರುತ್ತವೆ. ಯಾಕ್ ಸವಾರಿ ಮಾತ್ರ ತುಂಬಾ ದುಬಾರಿ. ಹಣ ಇಲ್ಲ ಅಂದರೆ ಸವಾರಿ ಬೇಡ. ಸ್ವಲ್ಪ ಖರ್ಚು ಮಾಡಿ ಯಾಕ್‌ನ ಮೇಲೆ ಕೂತು ಫೋಟೊ ಹೊಡೆಸಿಕೊಳ್ಳಬಹುದು.

ನಾವು ಒಂದಷ್ಟು ಹೊತ್ತು ಚಂಗು ಸರೋವರದ ಪರಿಸರದಲ್ಲಿ ಸುತ್ತಾಡಿದ ನಂತರ ನಥುಲಾ ಕಡೆ ಹೊರಡಲು ತಯಾರಾದೆವು. ‘ಈಗ ತಾನೆ ಬಂದ ಸುದ್ದಿ. ಮೇಲ್ಗಡೆ ರಸ್ತೆಯಲ್ಲೆಲ್ಲ ಹಿಮರಾಶಿ ಬಿದ್ದಿದೆ. ಅಲ್ಲಿ ಆಕ್ಸಿಜನ್ ಕಡಿಮೆ ಇದೆ. ಯಾರಿಗೂ ಹೃದಯ ತೊಂದರೆ ಇಲ್ಲವಲ್ಲ. ಕೆಲವು ಜೀಪ್‌ನವರು ವಾಪಸ್ ಬಂದರು. ಟ್ರಾಫಿಕ್ ಜಾಮ್ ಇದ್ದರೆ ನಾನೂ ವಾಪಸ್ ಬರುತ್ತೇನೆ’ ಎಂದು ಚಾಲಕ ಹೇಳಿಬಿಟ್ಟ.

‘ಏನೇ ಆಗಲಿ, ಈಗ ವಾಪಸ್ ಹೋಗೋದು ಬೇಡ. ನಥುಲಾಕ್ಕೆ ಹೊರಡೋಣ. ಪರಿಸ್ಥಿತಿ ನೋಡಿ ನಂತರ ಅಲ್ಲಿ ತೀರ್ಮಾನ’ ಅಂತ ನಾವೆಲ್ಲ ಪಟ್ಟುಹಿಡಿದ ನಂತರ ಡ್ರೈವರ್ ಜೀಪ್‌ನಲ್ಲಿ ಕೂತ. ಪರ್ವತಗಳ ನಡುವೆ ದಾರಿಯುದ್ದಕ್ಕೂ ಹಿಮರಾಶಿಯನ್ನು ಸೀಳಿಕೊಂಡು ಜೀಪ್ ಮುಂದೆ ಹೋಗುತ್ತಿತ್ತು. ನಥುಲಾ ಸಮೀಪಿಸಿದಂತೆ ಅಲ್ಲಲ್ಲಿ ಬೋರ್ಡುಗಳು: ‘ಚೀನಾ ನಿಮ್ಮನ್ನು ಗಮನಿಸುತ್ತಿದೆ.’



ಯಾಕ್‌ಗಳ ಸವಾರಿ ಸಿಕ್ಕಿಂನ ಪ್ರವಾಸಿ ಆಕರ್ಷಣೆಗಳಲ್ಲೊಂದು